Sri G. V. GOWDA.—Which is the agency to regularise the services of teachers ? Is it the Taluk Board ?

Sri S. R. KANTHI.—Yes.

Sri G. V. GOWDA.—What is the difficulty experienced by the Taluk Boards in regularising services of teachers who have put in more than two years ?

Sri S. R. KANTHI.—There are no rules. Rules are going to be framed. The Government rules do not apply.

Sri B. L. GOWDA.—Is the Taluk Board taken as a unit by itself or are several Taluk Boards grouped for purposes of appointment.

Sri S. R. KANTHI.—The Act is very clear. The appointments are to be made by the Taluk Boards themelves.

Sri G. V. GOWDA.—Has it come to the notice of Government that several Deputy Commissioners are insisting that they would appoint the teachers for these boards schools.

Sri S. R. KANTHI.—This question was pending settlement and now it has been settled that the D. C. will not appoint. It would be the Taluk Boards that would appoint.

Sri SANJEEVANATH AIKALA.—Why not the Government copy it from the Rules made by the Madras Government in this respect ?

Sri S. R. KANTHI.—The Government cannot do it. It has got its own rules.

Milk Societies formed under the Dairy Project Scheme.

*Q.—91. Sri K. LAKKAPPA (Hebbur).—

Will the Government be pleased to state :—

(*a*) the number of Milk Societies formed under the Dairy Project Scheme ;

(*b*) the number of applications pending for such formation of societies at various places under the new schemes ;

(*c*) the total amount grant allotted to the Societies ;

(*d*) what are the principles followed in selecting places for formation of Milk Societies ;

(*e*) will the Government place details of the names of those societies and names of villages together with office bearers selected last year ?

*A.—Sri M. V. KRISHNAPPA (Minister for Revenue).—

(*a*) Two hundred and Nineteen under the Bangalore Dairy Project. eight under the Bhadravathi Milk Supply Scheme.

(*b*) *Animal Husbandry Department*: Nill.
Bangalore Dairy Project: 29 applications.

(*c*) *Animal Husabndry Department*: Rs. 50,000 for 1963-64.

(SRI M. V. KRISHNAPPA)

Bangalore Dairy Project: No grants have been sanctioned by Government to these Milk Producers, Co-operative Societies. But loans have been sanctioned to the Societies as noted below:—

Year	*M.P.C.*	*Members*	*Amount*
			Rs.
1961—62	10	131	50,000
1962—63	11	144	60,000

A sum of Rs. 8,40,000 has been sanctioned as Retirable share capital under Government Order No. RD 44 VDD 63, dated the 1st August 1963 as per details furnished below:

(1) 100 M.P.C.S. at Rs. 5,000 each Rs. 5,00,000.
(2) State Co-operative Apex Bank, Bangalore Rs. 90,000.
(3) Bangalore District Co-operative Central Bank Rs. 1,25,000.
(4) Kolar District Co-operative Central Bank Rs. 1,00,000.
(5) Tumkur District Co-operative Central Bank Rs. 25,000.

(*d*) *Animal Husbandry Department*: The milk producers within the milk shed of a milk supply scheme must come forward to form a Co-operative Society.

Bangalore Dairy Project: Within a radius of 40 miles from Bangalore, 10 routes have been selected for collection of milk by vans. Roadside villages and interior villages within about two miles of these routes are generally selected for organising Milk Producers Co-operative Society.

(*e*) As per statements placed on the Table of the House.*

ಶ್ರೀ ಕೆ. ಲಕ್ಕಪ್ಪ.—ಬೆಂಗಳೂರು ಹಾಲು ಸರಬರಾಜು ಯೋಜನೆಯ ಮೇರೆಗೆ ಸಹಕಾರ ಸಂಘಗಳು ರಚನೆಯಾದರೂ ಇನ್ನೂ ಸಾಲದ ರೂಪವಾಗಿ ಹಣವನ್ನು ಕೊಡದೇ ಇರಲು ಕಾರಣವೇನು ?

†ಶ್ರೀ ಎಂ. ವಿ. ಕೃಷ್ಣಪ್ಪ.—100 ಸೊಸೈಟಿಗಳಿಗೆ ಸರ್ಕಾರ ಷೇರು ಕ್ಯಾಪಿಟಲ್ ಕೊಡಬೇಕೆಂಬುದಾಗಿ ತೀರ್ಮಾನಮಾಡಿ ಈಗಾಗಲೇ ಮೂರು ಜಿಲ್ಲೆಗಳಿಗೆ ಕೊಟ್ಟಿದೆ. ಆದರೆ ಡೈರಿ ಇನ್ನೂ ಪುರುವಾಗಿಲ್ಲ. ಅಗಸ್ಟ್ ತಿಂಗಳಿನಲ್ಲಿ ಪ್ರಾರಂಭಮಾಡುತ್ತೇವೆ. ಆ ರೀತಿ ಪ್ರಾರಂಭಮಾಡಿದ ಮೇಲೆ ಮತ್ತೆ 200 ಸೊಸೈಟಿಗಳನ್ನು ಸೆಲೆಕ್ಟ್ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಡೈರಿ ಪುರುವಾಗುವುದಕ್ಕೆ ಮುಂಚೆಯೇ ಹಣ ಸದ್ವಿನಿಯೋಗವಾಗಲಾರದೆಂದು ಸ್ವಲ್ಪ ನಿಧಾನಮಾಡುತ್ತಿದ್ದೇವೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಬೆಂಗಳೂರು ಹಾಲು ಸರಬರಾಜು ಯೋಜನೆಗಾಗಿ 29 ಅರ್ಜಿಗಳು ಬಂದಿವೆಯೆಂದು ಉತ್ತರದಲ್ಲಿ ಹೇಳಿದ್ದೀರಿ. ಅಂದಮೇಲೆ ಈ ಸೊಸೈಟಿಗಳು ರಿಜಿಸ್ಟರ್ ಆಗುವುದಕ್ಕೆ ಮುಂಚಿತವಾಗಿ ಪ್ರಾಜೆಕ್ಟ್ ಕೋ-ಆರ್ಡಿನೇಟರ್ ಇಂಥಿಂಥ ಸೊಸೈಟಿಗಳನ್ನು ರಿಜಿಸ್ಟರ್ ಮಾಡಬೇಕೆಂದು ಶಿಫಾರ್ಸುಮಾಡಬೇಕೆಂದು ಕಂಡೀಷನ್ ಹಾಕಿರುವುದು ನಿಜವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಕೋ-ಆರ್ಡಿನೇಟರ್ ಮತ್ತು ನಾವು ಅಸಿಸ್ಟೆಂಟ್ ರಿಜಿಸ್ಟ್ರಾರ್ ಅವರನ್ನು ಡೈರಿ ಸರ್ವಿಸ್ಸಿನಿಂದ ಲೆಂಟ್ ಮಾಡಿಕೊಂಡು ಇಟ್ಟುಕೊಂಡಿದ್ದೇವೆ. ಅವರು ಮತ್ತು ಕೋ—ಆರ್ಡಿನೇಟರ್ ಸಂಬಂಧಪಟ್ಟ ಜಿಲ್ಲೆಗಳಿಗೆ ಹೋಗಿ ಅಲ್ಲಿರತಕ್ಕ ಸಂಬಂಧಪಟ್ಟ ಅಸಿಸ್ಟೆಂಟ್ ಡೈರೆಕ್ಟರೊಡನೆ ಈ ಬಗ್ಗೆ ವಿಚಾರಮಾಡುತ್ತಾರೆ. ಆದೂ ಅಲ್ಲದೆ ಈಗ 40 ಮೈಲಿಗಳ ರೇಡಿಯಸ್ಸಿನಲ್ಲಿ ವ್ಯಾನುಗಳ ಮೂಲಕ ಹಾಲನ್ನು ಶೇಖರಿಸಲು 10 ಮಾರ್ಗಗಳನ್ನು ಆಯ್ಕೆ ಮಾಡಲಾಗಿದೆ

ಇಲ್ಲದೇ ಹೋದರೆ ಇಂಟೀರಿಯರ್ ಏರೇಜಸ್ಸಿನಲ್ಲಿ ನಮ್ಮ ವ್ಯಾನು ಹೋದರೆ ಅವುಗಳಲ್ಲಿ ಧೂಳು ಸೇರುತ್ತದೆ. ಅದಕ್ಕಾಗಿ ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ವ್ಯವಸ್ಥೆಮಾಡುವುದ ಕ್ಕೋಸ್ಕರ ಅಂತಹ ರಸ್ತೆಗಳ ಪಕ್ಕದಲ್ಲಿರುವ ಗ್ರಾಮಗಳನ್ನು ಹಾಗೂ ಅಂತಹ ರಸ್ತೆಗಳಿಂದ ಎರಡು ಮೈಲಿಗಳ ಒಳಭಾಗದಲ್ಲಿದ್ದರೂ ಅಂತಹ ಗ್ರಾಮಗಳನ್ನು ಸಾಮಾನ್ಯವಾಗಿ ತೆಗೆದುಕೊಳ್ಳ ಲಾಗುವುದು.

ಶ್ರೀ ಬಿ. ಚನ್ನಬೈರೇಗೌಡ.—(ಇ)ಗೆ ಉತ್ತರವಾಗಿ ಕೆಲವು ಸಹಕಾರ ಸಂಘಗಳಿಗೆ ಸರ್ಕಾರದ ಆದೇಶದಂತೆ ಸುಮಾರು 8 ಲಕ್ಷ 40 ಸಾವಿರ ರೂಪಾಯಿಗಳನ್ನು ಹಿಂದಕ್ಕೆ ಕೊಡತಕ್ಕ ಷೇರು ಬಂಡವಾಳವಾಗಿ ಮಂಜೂರುಮಾಡಲಾಗಿದೆ ಎಂಬುದಾಗಿ ಹೇಳಿದ್ದೀರಿ. ಹಾಗಾದರೆ ಆಂತಹ ಸೊಸೈಟಿಗಳಿಗೆ ಹಾಲನ್ನು ಸರಬರಾಜು ಮಾಡುತ್ತಿದ್ದೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅವು ನಮ್ಮ ಸೊಸೈಟಿಗಳಲ್ಲ ಕೆಲವರು ಸಹಕಾರ ಸಂಘಗಳನ್ನು ಬೇರೆಯಾಗಿ ಮಾಡಿಕೊಂಡಿದ್ದಾರೆ. ಜಿಲ್ಲಾ ಬ್ಯಾಂಕುಗಳಿಂದ ಕೆಲವು ಸೊಸೈಟಿಗಳಿಗೆ ಹಣವನ್ನು ಸಾಲದ ರೂಪವಾಗಿ ಕೊಟ್ಟಿದ್ದಾರೆ. ಆದರೆ ಅಂತಹ ಸೊಸೈಟಿಗಳಲ್ಲಿ ಇನ್ನೂ ಡೈರಿ ಶುರುವಾಗಿಲ್ಲ. ಆದರಿಂದ ತೊಂದರೆಯಾಗಿದೆ. ಆದ್ದರಿಂದ ವ್ಯಾನುಗಳಿಂದ ಅಂತಹ ಕಡೆಗಳಲ್ಲಿ ಹಾಲನ್ನು ಕಲೆಕ್ಟ್ ಮಾಡಿದರೆ ಅಲ್ಲಿನವರಿಗೆ ಅನುಕೂಲವಾಗುತ್ತದೆ. ಕೆಲವು ಸೊಸೈಟಿಗಳು ದೊಡ್ಡಬಳ್ಳಾಪುರದಲ್ಲಿ ಹಣವನ್ನು ತೆಗೆದುಕೊಂಡಿದ್ದರೂ ಹಸುಗಳನ್ನು ಕೊಂಡು ಹಾಲು ಸಪ್ಲೈಮಾಡುತ್ತಿಲ್ಲ. ಈ ವಿಷಯ ಮಾನ್ಯ ಸದಸ್ಯರಾದ ಶ್ರೀಮಾನ್ ರಾಮೇಗೌಡರಿಗೂ ಗೊತ್ತಿದೆ. ಮತ್ತೆ ಕೆಲವು ಸೊಸೈಟಿಗಳಲ್ಲಿ ಇನ್ನೂ ಡೈರಿಯೇ ಶುರುವಾಗಿಲ್ಲ. ಅವು ನಮ್ಮವೂ ಅಲ್ಲ. ಈಗ 300 ಸೊಸೈಟಿಗಳ ಪೈಕಿ 100 ಸೊಸೈಟಿಗಳನ್ನು ಶುರು ಮಾಡಬೇಕೆಂದು ಅವುಗಳಿಗೆ ಷೇರು ಕ್ಯಾಪಿಟಲ್ಲನ್ನು ಕೊಟ್ಟಿದ್ದೇವೆ. ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ಅವರವರೇ ಕೆಲವು ಬ್ಯಾಂಕ್‌ಗಳಲ್ಲಿ ಸಾಲತೆಗೆದುಕೊಂಡು ಸಹಕಾರ ಸಂಘಗಳನ್ನು ಮಾಡುತ್ತಿದ್ದಾರೆ. ಅಂತಹ ಸಹಕಾರಸಂಘಗಳಿಗೂ ನಮಗೂ ಏನೂ ಸಂಬಂಧವಿಲ್ಲ.

12-30 P.M.

ಶ್ರೀ ಇ. ನಾರಾಯಣ ಗೌಡ.—ಈಗ ಸೊಸೈಟಿಗಳಿಗೆ ಹಸುಗಳನ್ನು ಕೊಂಡುಕೊಳ್ಳಲು ಹಣವನ್ನು ಕೊಡುವುದಕ್ಕೆ ಬದಲಾಗಿ ಸರ್ಕಾರದವರೇ ಉತ್ತಮವಾದ ಹಸುಗಳನ್ನು ತಂದು ಅವರಿಗೆ ಒದಗಿಸುವುದಕ್ಕೆ ಏರ್ಪಾಡು ಮಾಡುತ್ತಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಸದಸ್ಯರು ಹೇಳುವುದೇನೋ ಒಳ್ಳೆಯ ಸಲಹೆ. ಆದರೆ ಆ ವಿಚಾರದಲ್ಲಿ ಸ್ವಲ್ಪ ತೊಂದರೆಯಾಗುತ್ತದೆ. ಸರ್ಕಾರದವರೇ ಹಸುಗಳನ್ನು ಕೊಂಡುಕೊಳ್ಳುವುದಕ್ಕೆ ಹೋದರೆ ಸ್ವಲ್ಪ ಹೆಚ್ಚುಕಡಿಮೆಯಾಗುತ್ತದೆ. ಆದ್ದರಿಂದ ಯಾರು ಹಸುಗಳನ್ನು ಕಾಪಾಡು ತ್ತಾರೆಯೋ ಅವರೇ ಅವುಗಳನ್ನು ಕೊಂಡುಕೊಳ್ಳುವುದು ಉತ್ತಮ.

ಶ್ರೀ ಕೆ. ಲಕ್ಕಪ್ಪ.—ಸರ್ಕಾರದಿಂದ ಸಾಲ ಪಡೆದಿರುವ ತುಮಕೂರಿನ ಹಾಲಿನ ಸಂಘದ ಸೆಕ್ರೆಟರಿಯವರನ್ನೂ ಮತ್ತು ಪ್ರೆಸಿಡೆಂಟರನ್ನೂ ಪೋಲೀಸಿನವರು ಹುಡುಕುತ್ತಾ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ತುಮಕೂರಿನಲ್ಲಿ ಯಾವ ಸಂಘಕ್ಕೂ ಹಣವನ್ನು ನಾವು ಕೊಟ್ಟಿಲ್ಲ. ಅದರೆ ತುಮಕೂರು ಡಿಸ್ಟ್ರಿಕ್ಟ್ ಕೋ-ಆಪರೇಟೀವ್ ಬ್ಯಾಂಕಿಗೆ 25 ಸಾವಿರ ರೂಪಾಯಿಗಳನ್ನು ಷೇರು ಬಂಡವಾಳವಾಗಿ ಕೊಟ್ಟಿದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಹೋದ ಸಾರಿ ಅಧಿವೇಶನ ನಡೆಯುತ್ತಿರುವಾಗ ಮಾನ್ಯ ರೆವಿನ್ಯೂ ಮಂತ್ರಿಗಳು ಇಲ್ಲಿ ಮುಂದಿನ ಸೆಷನ್ನಿನ ಹೊತ್ತಿಗೆ ಐಸ್‌ಕ್ರೀಮ್ ಮತ್ತು ಮಿಲ್ಕ್ ಬೂತ್‌ಗಳನ್ನು ತೆರೆಯುತ್ತೇವೆಂದು ಹೇಳಿದ್ದರು, ಆದರೆ ಅದನ್ನು ಇನ್ನೂ ಮಾಡಲಲ್ಲ. ಈಗ ದೊಡ್ಡ ಬಳ್ಳಾಪುರದಿಂದ ಹಾಲನ್ನು ತಂದು ಬೆಂಗಳೂರಿನಲ್ಲಿ ಮಾರುತ್ತೇವೆಂದು ಹೇಳುತ್ತಾರೆ. ಬೆಂಗಳೂರಿನಲ್ಲಿ ಎಲ್ಲಿ ಮಾರುತ್ತಾರೋ ನಮಗೆ ಗೊತ್ತಿಲ್ಲ. ಮಾರತಕ್ಕ ಸ್ಥಳಗಳ ಅಡ್ರೆಸ್ಸನ್ನಾದರೂ ಕೊಟ್ಟರೆ ನಾವು ಅಲ್ಲಿ ಹಾಲನ್ನು ಕೊಂಡುಕೊಳ್ಳಬಹುದು. ಬೆಂಗಳೂರಿನಲ್ಲಿ ನಾವಿರುವಕಡೆ ಎಂದರೆ ಬನವನಗುಡಿ ಯಲ್ಲಿ ಒಂದುಲೀಟರ್ ಹಾಲಿಗೆ ಒಂದುರೂಪಾಯಿ ನಲವತ್ತು ನಯಾಪೈಸಾ ಚಾರ್ಜುಮಾಡುತ್ತಾರೆ. ಇದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

Mr. SPEAKER.—That is a matter for correspondence.

ಶ್ರೀ ಎಂ. ವಿ. ಕೃಷ್ಣಪ್ಪ.—ನಾನು ಆ ರೀತಿ ಹೇಳಿದ್ದು ನಿಜ. ಈ ನಮ್ಮ ಅಸೆಂಬ್ಲಿ ಮೀಟಿಂಗ್ ದಸರಾಧಲ್ಲಿ ನಡೆಯಬಹುದು ಎಂದು ನಾವು ಅಂದುಕೊಂಡಿದ್ದೆವು. ಈ ಸೆಷನ್ ಬಹಳ ಜಾಗ್ರತೆಯಾಗಿ ಪ್ರಾರಂಭವಾದ್ದರಿಂದ ಈಗ ಇಲ್ಲಿ ಮಿಲ್ಕ್ ಬೂತನ್ನು ಪ್ರಾರಂಭ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಅದಕ್ಕೆ ಸಂಬಂಧಪಟ್ಟ ಯೋಜನೆ ಸಿದ್ಧವಾಗಿದೆ. ಆ ಯೋಜನೆಯನ್ನು ಪ್ರೈಮ್ ಮಿನಿಸ್ಟರ್ ಅವರು ಪ್ರಾರಂಭ ಮಾಡುವುದಾಗಿ ವಾಗ್ದಾನ ಮಾಡಿದ್ದಾರೆ. ಅದನ್ನು ಆಗಸ್ಟ್ ತಿಂಗಳಿನಲ್ಲಿ ಪ್ರಾರಂಭ ಮಾಡುತ್ತೇವೆ.

ಶ್ರೀ ಬಿ. ಎಲ್. ಗೌಡ.—ಹಾಲಿನ ಯೋಜನೆ ಇಲ್ಲದೆ ಇರುವ ಸ್ಥಳಗಳಲ್ಲಿ ಹಾಲಿನ ಸೊಸೈಟಿಗಳನ್ನು ಯಾರಾದರೂ ಮಾಡಿಕೊಂಡರೆ ಅವರಿಗೆ ಸರ್ಕಾರದವರು ಏನು ಸಹಾಯ ಮಾಡುತ್ತಾರೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಎಲ್ಲೆಲ್ಲಿ ಹಾಲಿನ ಯೋಜನೆಗಳನ್ನು ಮಾಡುತ್ತಾರೆಯೋ ಅಲ್ಲಿಗೆ ಡಿಸ್ಟ್ರಿಕ್ಟ್ ಬ್ಯಾಂಕಿನವರು ಸಹಾಯವನ್ನು ಮಾಡಬಹುದು. ಅದು ಡಿಸ್ಟ್ರಿಕ್ಟ್ ಬ್ಯಾಂಕಿನವರ ಇಷ್ಟ. ಮಾನ್ಯ ಸದಸ್ಯರು ಒಂದು ಬ್ಯಾಂಕಿನ ಪ್ರೆಸಿಡೆಂಟರಾಗಿದ್ದಾರೆ. ಅವರಿಗೆ ವಿಷಯವೆಲ್ಲವೂ ಚೆನ್ನಾಗಿ ಗೊತ್ತಿದೆ. ಇದರ ಬಗ್ಗೆ ಒಂದು ನರ್‌ಕ್ಯುಲರ್ ಅನ್ನು ಕೂಡ ನಾವು ಹೊರಡಿಸಿದ್ದೇವೆ. ಅದರಲ್ಲಿ ಎಲ್ಲಾ ವಿಷಯಗಳನ್ನು ವಿಶದವಾಗಿ ಕೊಟ್ಟಿದೆ. ಮಾನ್ಯ ಸದಸ್ಯರು ಬೇಕಾದರೆ ಅದನ್ನು ನೋಡಬಹುದು. ಈಗ ನಾವು ಮೈಸೂರು ಸ್ಟೇಟ್‌ನಲ್ಲಿ ಹಾಲಿನ ಸೆಂಟರನ್ನು ಮಾಡುವುದಕ್ಕೋಸ್ಕರ 7-8 ಜಾಗಗಳನ್ನು ಆರಿಸಿಕೊಂಡಿದ್ದೇವೆ. ಮಂಗಳೂರು, ಬೆಂಗಳೂರು, ಶಿವಮೊಗ್ಗ, ಹುಬ್ಬಳ್ಳಿ, ಧಾರವಾಡ, ಬೆಳಗಾಮ್, ಗುಲ್ಬರ್ಗ, ಮತ್ತು ಮೈಸೂರು ಈ ಸ್ಥಳಗಳನ್ನು ಆರಿಸಿಕೊಂಡಿದ್ದೇವೆ. ಈ ಸ್ಥಳಗಳಲ್ಲಿ ಮೊದಲು ಹಾಲಿನ ಕೇಂದ್ರಗಳನ್ನು ಪ್ರಾರಂಭ ಮಾಡುತ್ತೇವೆ. ಅನಂತರ ಬಾಕಿ ಕಡೆಯೂ ಮಾಡಬೇಕಾಗುತ್ತದೆ.

ಶ್ರೀ ಟಿ. ಜಿ. ನತ್ಯನಾರಾಯಣ.—ಈ ಮಿಲ್ಕ್ ಸೊಸೈಟಿಗಳು ಬೆಂಗಳೂರು ಮತ್ತು ಮೈಸೂರು ಸಿಟಿಗಳಲ್ಲಿ ಫೈಲ್ಯೂರ್ ಆಗಿವೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಎಮ್ಮೆ ಮತ್ತು ಹಸುಗಳ ಹಾಲಿನ ವ್ಯಾಪಾರ ಅಷ್ಟು ಸುಲಭವಾದ ವ್ಯಾಪಾರವಲ್ಲ. ಹಾಲಿಗೆ ನೀರನ್ನು ಹಾಕದೆ ಇದ್ದರೆ ಲಾಭ ಬರುವುದಿಲ್ಲ. ಅವರು ನಷ್ಟವನ್ನು ಅನುಭವಿಸಬೇಕಾಗುತ್ತದೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಈಗ ಮಂಗಳೂರಿನಲ್ಲಿ ತೆರೆಯಬೇಕೆಂದಿರುವ ಹಾಲಿನ ಕೇಂದ್ರಕ್ಕೆ ಸರ್ಕಾರದವರು ಎಷ್ಟು ಹಣ ಸಹಾಯವನ್ನು ಮಾಡುತ್ತಾರೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಂಗಳೂರಿನ ಹಾಲಿನ ಯೋಜನೆಗೆ ಸಂಬಂಧಪಟ್ಟ ಹಾಗೆ 12 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಯೋಜನೆ ಮಾಡಲಾಗಿದೆ. ಅದಕ್ಕೆ ಬೇಕಾದ ಕಟ್ಟಡವನ್ನು ಕಟ್ಟಲು ಅಲ್ಲಿ ಫೌಂಡೇಷನ್ ಕೂಡ ಹಾಕಿದೆ. ಅದಕ್ಕೆ ಈಗಾಗಲೇ ಎರಡು ಲಕ್ಷ ರೂಪಾಯಿಗಳು ಮಂಜೂರಾಗಿವೆ. ಈಗಾಗಲೇ ಅಲ್ಲಿ ಕೆಲಸ ಪ್ರಾರಂಭವಾಗಿದೆ.

ಶ್ರೀ ಎನ್. ಎಂ. ಕೃಷ್ಣ.—ಬೆಂಗಳೂರಿನ ಸುತ್ತಮುತ್ತಲೂ 40 ಮೈಲಿಗಳ ಅಂತರದಲ್ಲಿ ವ್ಯಾನುಗಳ ಮೂಲಕ ಹಾಲನ್ನು ಶೇಖರಿಸಲು 10 ಮಾರ್ಗಗಳನ್ನು ಆಯ್ಕೆ ಮಾಡಲಾಗಿದೆ ಎಂದು ಹೇಳಿದ್ದೀರಿ, ಬೆಂಗಳೂರು ಬಹಳ ದೊಡ್ಡದು, ಆದ್ದರಿಂದ 40 ಮೈಲಿಗಳ ಅಂತರ ಇರತಕ್ಕದ್ದನ್ನು 50 ಮೈಲಿಗೆ ಜಾಸ್ತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗ ಸದ್ಯಕ್ಕೆ 40 ಮೈಲಿಗಳ ಅಂತರವನ್ನು ಫಿಕ್ಸ್ ಮಾಡಿದ್ದೇವೆ. ಆ ಮೇಲೆ ನೋಮನ ಹಳ್ಳಿಯನ್ನೂ ಸೇರಿಸಿಕೊಳ್ಳುತ್ತೇವೆ. ತುಮಕೂರು ಮತ್ತು ಮಂಡ್ಯಾ ಜಿಲ್ಲೆಗಳು ಬೆಂಗಳೂರಿಗೆ ಹತ್ತಿರ ಇರುವುದರಿಂದ ಅಲ್ಲಿಯೂ ಹಾಲಿನ ನರಬರಾಯಿ ಯೋಜನೆಯನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹಾಲಿನ ಸೊಸೈಟಿಗಳಿಗೆ ಮಿಶ್ರಜಾತಿಯ ಹಸುಗಳನ್ನು ಮತ್ತು ಎಮ್ಮೆಗಳನ್ನು ತರಿಸಿಕೊಡುವುದಕ್ಕೆ ಸರ್ಕಾರದವರು ಯೋಚನೆ ಮಾಡುತ್ತಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಎಮ್ಮೆಗಳನ್ನು ಬೇಕಾದರೆ ತರಿಸಬಹುದು. ಮಿಶ್ರ ಜಾತಿಯ ಹಸುಗಳೆಲ್ಲಾ ಬೆಂಗಳೂರಿನಲ್ಲಿ ಇವೆ. ಬೇರೆ ಕಡೆ ಊಟಿಯಲ್ಲಿ ಮಿಶ್ರಜಾತಿಯ ಹಸುಗಳು ಇದ್ದವು, ಈಗ ಅಲ್ಲಿಯೂ ಕಡಿಮೆಯಾಗಿವೆ. ಬೆಂಗಳೂರಿನಲ್ಲಿರತಕ್ಕ ಹಸುಗಳಿಗೆಲ್ಲಾ ರೋಗ ಇದೆ. ಆದ್ದರಿಂದ ಆ ಹಸುಗಳನ್ನು ಹಳ್ಳಿಗಳ ಕಡೆಗೆ ಕಳುಹಿಸುವುದಕ್ಕೆ ಸಾಧ್ಯವಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ಬರೀ ಎಮ್ಮೆ ಮತ್ತು ಹಸುವಿನ ಹಾಲಿನ ಡೈರಿ ಮಾತ್ರ ಇದೆ. ಬೇರೆ ಯಾವ ಹಾಲೂ ಇಲ್ಲ. ಮೇಕೆ ಹಾಲು ಬಹಳ ಒಳ್ಳೆಯದು. ಆದ್ದರಿಂದ ಈ ಹಾಲಿನ ನರಬರಾಯಿ ಸಂಘಗಳಿಗೆ ಮೇಕೆಗಳನ್ನೇನಾದರೂ ಕೊಡುವುದಕ್ಕೆ ಏರ್ಪಾಟು ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮೇಕೆ ಹಾಲಿನಲ್ಲಿ ಜಿಡ್ಡು ಜಾಸ್ತಿ ಇರುತ್ತದೆ. ಅದು ಕೆಲವು ಜನ ಗಳಿಗೆ ಹಿಡಿಸುವುದಿಲ್ಲ. ಆದ್ದರಿಂದ ಜನಗಳು ಅದನ್ನು ಕೊಂಡುಕೊಳ್ಳದೆ ಇದ್ದರೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಟಿ. ಮಾದಯ್ಯ ಗೌಡ.—ಈಗ ಬೆಂಗಳೂರಿನಲ್ಲಿ ಹಾಲಿನ ನರಬರಾಯಿಯ ಕೇಂದ್ರವನ್ನು ಮಾಡಿರುವಂತೆ ಗ್ರಾಮಾಂತರ ಪ್ರದೇಶಗಳಿಂದ ತರಕಾರಿ ಮತ್ತು ಮೊಟ್ಟೆಗಳನ್ನೂ ತರಿಸಿ ವ್ಯಾಪಾರ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡುವುದಕ್ಕೆ ಸರ್ಕಾರದವರು ಏರ್ಪಾಡು ಮಾಡು ತ್ತಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗಾಗಲೇ ಮೊಟ್ಟೆಗಳನ್ನು ತರಿಸಿ ಮಾರಾಟ ಮಾಡುತ್ತಿದ್ದಾರೆ ಈಗ ಕಬ್ಬನ್ ಪಾರ್ಕಿನಲ್ಲಿ ಮೊಟ್ಟೆಗಳನ್ನು ಮಾರಾಟ ಮಾಡತಕ್ಕ ಒಂದು ಬೂತ್ ಇದೆ. ಅಲ್ಲಿ ಈಗ ಒಂದು ದಿವಸಕ್ಕೆ 5 ಸಾವಿರ ಮೊಟ್ಟೆಗಳ ಮಾರಾಟವಾಗುತ್ತಿವೆ. ಇನ್ನು ತರಕಾರಿಯೆನ್ನು ತರಿಸಿ ಮಾರಾಟ ಮಾಡುವುದೆಂದರೆ ಅದು ಬಹಳ ಚಿಲ್ಲರೆ ಕೆಲಸ. ಅಂಥವುಗಳನ್ನೆಲ್ಲಾ ಮಾಡುವುದಕೆ ಹೋದರೆ ಅದರಲ್ಲಿ ಹೆಚ್ಚು ಕಡಿಮೆಯಾಗುತ್ತದೆ. ಮತ್ತು ತೊಂದರೆಯಾಗುತ್ತದೆ.

Extent of Land under Grape Cultivation in the State.

*Q.—97. Sri C. R. RANGE GOWDA (Magadi).—

Will the Government be pleased to state :—

(*a*) the extent of land under Grape cultivation in the State (Talukwise information my be funished) ;

(*b*) whether they would consider to give licence to prepare Grape Wine out of it ?

A.—Sri H. C. BORAIAH (Parlimentary Secretary to the Minister for Agriculture).—

(*a*) The area under Grape Cultivation in the State is about 9,000 acres. Talukwise information is not readily available.

(*b*) This will be considered by the competent authority, *viz.*, the Excise Commissioner in Mysore, as per rules.

ಶ್ರೀ ಸಿ. ಆರ್. ರಂಗೇಗೌಡ.—ಸ್ವಾಮಿ ನನ್ನ (ಬಿ) ಪ್ರಶ್ನೆಗೆ ಉತ್ತರವಾಗಿ ದ್ರಾಕ್ಷಾರಸವನ್ನು ತಯಾರಿಸಲು ಪರವಾನೆಯನ್ನು ಕೊಡುವ ಬಗ್ಗೆ ನಿಯಮಾವಳಿಗಳ ಮೇರೆಗೆ ಸಂಬಂಧಪಟ್ಟ ಅಧಿ ಕಾರಿಗಳು ಎಂದರೆ ಮೈಸೂರು ರಾಜ್ಯದ ಅಬ್ಕಾರಿ ಕಮೀಷನರು ಪರ್ಯಾಲೋಚಿಸುವರು ಎಂದು ಸರ್ಕಾರದವರು ಹೇಳಿದ್ದಾರೆ, ಇದರಿಂದ ಲೈಸೆನ್ಸ್ ಕೊಡುವುದು ದಿರೇ ಆಗುತ್ತದೆ. ಈಗ ನಮ್ಮ ದೇಶದಲ್ಲಿ ದ್ರಾಕ್ಷಿ ಬೆಳೆ ಬಹಳ ಹೆಚ್ಚಿಗೆ ಆಗುತ್ತಿದೆ. ಅದನ್ನು ಸದ್ವಿನಿಯೋಗ ಮಾಡಿಕೊಳ್ಳಲು ಏನಾ ಧರೂ ಕಾರ್ಯಕ್ರಮವನ್ನು ಕೈಗೊಂಡಿದ್ದೀರಾ ?

ಶ್ರೀ ಎಚ್. ಸಿ. ಬೋರಯ್ಯ.—ದ್ರಾಕ್ಷಿ ಹಣ್ಣಿನಿಂದ ವೈನನ್ನು ತಯಾರಿಸಲು ಲೈಸೆನ್ಸಿಗೋಸ್ಕರ ಕೆಲವರು ಅರ್ಜಿಗಳನ್ನು ಹಾಕಿದ್ದಾರೆ. ಆದರೆ ಆ ಬಗ್ಗೆ ಸರ್ಕಾರದವರು ಪ್ರತ್ಯೇಕವಾಗಿ ಯಾವ ಕಾರ್ಯಕ್ರಮವನ್ನೂ ಕೈಗೊಳ್ಳಲು ಆಲೋಚನೆಯನ್ನು ಇಟ್ಟುಕೊಂಡಿಲ್ಲ.

ಶ್ರೀ ಸಿ. ಆರ್. ರಂಗೇಗೌಡ.—ಈಗ ದ್ರಾಕ್ಷಾರಸವನ್ನು ತಯಾರಿಸಲು ಲೈಸೆನ್ಸಿಗೋಸ್ಕರ ಯಾರು ಯಾರು ಯಾವಾಗ ಅರ್ಜಿಗಳನ್ನು ಹಾಕಿದ್ದಾರೆಂಬುದನ್ನೆಲ್ಲಾ ಪರಿಶೀಲನೆ ನಡೆಸಿ ಅವು ಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಕೊಟ್ಟು ಅದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುವಂತೆ ಏನಾದರೂ ಕ್ರಮವನ್ನು ಕೈಗೊಂಡಿದ್ದೀರಾ ?

ಶ್ರೀ ಎಚ್. ಸಿ. ಬೋರಯ್ಯ.—ಅದಕ್ಕೆ ಸಂಬಂಧಪಟ್ಟಂತಹ ರೂಲ್ಸುಗಳನ್ನು ಸರ್ಕಾರದವರು ತಯಾರು ಮಾಡಿರುತ್ತಾರೆ. 23-1-1964 ರಲ್ಲಿ ರೂಲ್ಸು ತಯಾರು ಮಾಡಿದ್ದೇವೆ. ಅದಕ್ಕೆ ಮುಂಚೆಯೂ ಕೆಲವು ಅರ್ಜಿಗಳು ಬಂದಿವೆ, ಆ ನಂತರವೂ ಕೆಲವು ಅರ್ಜಿಗಳು ಬಂದಿವೆ. ರೂಲ್ಸು ಪ್ರಕಾರ ಅರ್ಜಿಗಳನ್ನು ಹಾಕಬೇಕೆಂದು ಎಲ್ಲರಿಗೂ ತಿಳಿಸಿದ್ದೇವೆ. ಬಂದಿರುವ ಎಲ್ಲ ಅರ್ಜಿಗಳನ್ನೂ ಪರಿಶೀಲನೆ ಮಾಡಬೇಕಾಗುತ್ತದೆ.